

# ಜೈಲಿನ ನೆರಳು

**ಮಹಾತ್ಮ ಮತ್ತು ಹರಿಲಾಲ್**


■ ಮೂಲ: **ದಿನಕರ್ ಜೋಶಿ**

■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಕಲೆ: ಮನೋಹರ ಆಚಾರ್ಯ


## ಜೈಲಿನಲ್ಲಿ ಹರಿಲಾಲ್

ಇದನ್ನು ಕೇಳಿ ಹರಿಲಾಲನಿಗೆ ಆಶ್ಚರ್ಯವಾಯಿತು. ಅವನ ಬಾಯಿಯಿಂದ ಮಾತೇ ಹೊರಡಲಿಲ್ಲ. ಅವನ ಮುಖದಲ್ಲಿ ಅನುಚಿತ ಭಾವನೆ ಆವರಿಸಿತು. ಬಾಪೂ ಏನು ಹೇಳುತ್ತಿದ್ದರು? ಸತ್ಯಾಗ್ರಹಿಗಳ ಪರವಾಗಿ ವಕೀಲರಾದ ಗಾಂಧಿಜಿಯವರ ಹೇಳಿಕೆ ಮುಂದುವರೆಯುತ್ತಿತ್ತು 'ಯಾಕೆಂದರೆ, ಒಂದು ವೇಳೆ ಇವರಿಗೆ ಅಲ್ಪಾವಧಿಯ ಶಿಕ್ಷೆಯನ್ನು ವಿಧಿಸಿದರೆ, ಇವರು ಜೈಲಿನಿಂದ ಹೊರ ಬರುತ್ತಲೇ ಮತ್ತೆ ಸತ್ಯಾಗ್ರಹವನ್ನು ಮಾಡಿ ಮತ್ತೆ ಬಂಧಿಸಲ್ಪಡುತ್ತಾರೆ, ಮತ್ತೆ ಘನ ನ್ಯಾಯಾಲಯದ ಅಮೂಲ್ಯ ವೇಳೆ ನಾಶವಾಗುತ್ತದೆ. ಸತ್ಯಾಗ್ರಹಿಗಳು ಮತ್ತು ನ್ಯಾಯಾಲಯ –ಈ ಎರಡರ ಸಮಯ ಹಾಳಾಗಬಾರದೆಂದು ನಾನು ಸನ್ಮಾನ್ಯ ಸದಸ್ಯರಿಗೆ, ಇವರಿಗೆ ದೀರ್ಘ ಅವಧಿಯ ಶಿಕ್ಷೆಯನ್ನು ನೀಡಬೇಕೆಂದು ಅಪೀಲು ಮಾಡುತ್ತೇನೆ.'

ನ್ಯಾಯಾಲಯದಲ್ಲಿದ್ದ ಸತ್ಯಾಗ್ರಹಿಗಳು ಚಪ್ಪಾಳೆ ತಟ್ಟಿ ವಕೀಲರ ವಿನಂತಿಯನ್ನು ಸಮರ್ಥಿಸಿದರು. ಬ್ರಿಟಿಷ್ ಅಧಿಕಾರಿಗಳು ಮತ್ತು ಸ್ವತಃ ನ್ಯಾಯಾಲಕ್ಕೂ ಈ ನಿವೇದನೆಯನ್ನು ಕೇಳಿ ಆಶ್ಚರ್ಯವಾಯಿತು; ಆದರೆ ಸತ್ಯಾಗ್ರಹಿಗಳ ಚಪ್ಪಾಳೆಗಳ ಸದ್ದಿನೆದುರು ಅವರು ಯಾವುದೇ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸದಾದರು.

ನ್ಯಾಯಾಲಯ ಈ ಸತ್ಯಾಗ್ರಹಿಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸಿತು. ಹರಿಲಾಲನ ಈ ಮೊದಲ ಜೈಲು ಯಾತ್ರೆಗೆ ವಕೀಲರಾದ ಗಾಂಧೀಜಿಯವರು ಕೇಳಿದಷ್ಟು ದೀರ್ಘ ಶಿಕ್ಷೆಯನ್ನು ಸರ್ಕಾರ ವಿಧಿಸಲಿಲ್ಲ. ಕೆಲವೇ ದಿನಗಳ ನಂತರ ಹರಿಲಾಲ ಮತ್ತು ಅವನ ಸಂಗಡಿಗರು ಜೈಲಿನಿಂದ ಬಿಡುಗಡೆಯಾದರು. ಮುಸುಕಿನ ಜೋಳದ ಗಂಜಿ ಅಥವಾ ಬ್ರೆಡ್‌ನ ಚೂರುಗಳು ಹರಿಲಾಲನನ್ನು ಚಂಚಲಗೊಳಿಸಲು ಸಾಧ್ಯವಾಗಲಿಲ್ಲ. ಸಶ್ರಮ ಶಿಕ್ಷೆಯಿಂದ ಅವನ ಮಾಂಸಖಂಡಗಳು ಬಲಿಷ್ಠಗೊಂಡವು. ನ್ಯಾಯಾಲಯದಲ್ಲಿ ಅಂದು ಬಾಪೂ ಹೇಳಿದಂತೆಯೇ ಅವನು ಜೈಲಿನಿಂದ ಬಿಡುಗಡೆಯಾದೊಡನೆಯೇ ಮತ್ತೆ ಸತ್ಯಾಗ್ರಹ ಮಾಡಿ, ಬಂಧಿತನಾಗಲು ವ್ಯಗ್ರನಾಗಿದ್ದ. ಆದರೆ ಮತ್ತೆ ಬಂಧಿಯಾಗುವುದಕ್ಕೂ ಮೊದಲು, ಬಾಪೂ ಅವರನ್ನು ಭೇಟಿಯಾಗಿ ಹೋರಾಟದ ಭಾವಿ ರೂಪುರೇಷೆಗಳ ಬಗ್ಗೆ ಚರ್ಚಿಸುವ ಉದ್ದೇಶದಿಂದ ಅವನು ಜೈಲಿನಿಂದ ಬಿಡುಗಡೆಯಾದ ನಂತರ ಬಾಪೂ ಅವರ ಬಳಿಗೆ ಹೋಗುವುದಕ್ಕೆ ಸರ್ಕಾರದ ಅನುಮತಿಯನ್ನು ಯಾಚಿಸಿದ. ಆದರೆ ಇದಕ್ಕೆ ವಿರುದ್ಧವಾದ ಘಟನೆ ನಡೆಯಿತು.

ಬಾಪೂ ಹರಿಲಾಲನನ್ನು ನಿರೀಕ್ಷಿಸುತ್ತಾ ನಿರ್ಬಂಧಿತ ಪ್ರದೇಶದಲ್ಲಿ ನಿಂತಿದ್ದರು; ಆಂಗ್ಲ ಪೊಲೀಸರು ಹರಿಲಾಲನನ್ನು ಆ ಪ್ರದೇಶದ ಇನ್ನೊಂದು ಭಾಗಕ್ಕೆ ಬಿಟ್ಟರು. ಈಗ ಹರಿಲಾಲನೆದುರು ಸಮಸ್ಯೆಯೊಂದು ಎದುರಾಯಿತು; ಬಾಪೂ ಅವರನ್ನು ಭೇಟಿಯಾಗಲು ಮತ್ತೆ ಕಾನೂನನ್ನು ಮುರಿಯದೆ ಆ ಪ್ರದೇಶಕ್ಕೆ ಹೋಗುವಂತಿರಲಿಲ್ಲ. ಅವನು ಹೀಗೆ ಮಾಡಿದ್ದರೆ, ಸರ್ಕಾರ ಅವನನ್ನು ಮತ್ತೆ ಬಂಧಿಸುವುದು ನಿಶ್ಚಯವಾಗಿತ್ತು. ಬಾಪೂ ಅವರನ್ನು ಭೇಟಿಯಾಗದೆ ಬೇರೆ ಜೈಲಿಗೆ ಹೋಗುವುದು ನಿಶ್ಚಿತವಾಗಿತ್ತು.

ಈ ಹೊಯ್ದಾಟದಲ್ಲಿ ಹರಿಲಾಲ ಕೆಲವು ದಿನಗಳನ್ನು ಚಾರ್ಲ್ಸ್‌ಟೌನ್‌ನಲ್ಲಿ ಕಳೆದ, ಆಗಲೇ ಸರ್ಕಾರ ಬಾಪೂ ಅವರನ್ನು ಸಹ ಬಂಧಿಸಿತು. ಬಾಪೂ ಅವರನ್ನು ಜೋಹಾನ್ಸ್‌ಬರ್ಗ್ ಜೈಲಿನಲ್ಲಿಡಲಾಯಿತು. ಜೋಹಾನ್ಸ್‌ಬರ್ಗ್‌ನಲ್ಲಿದ್ದ ಭಾರತೀಯ ಸಮುದಾಯ ಬಾಪೂ ಅವರ ಈ ಬಂಧನದಿಂದ ರೇಗಿತು. ಸರ್ಕಾರದ ಈ ಹೆಜ್ಜೆಯನ್ನು ವಿರೋಧಿಸಲು ಒಂದು ವಿಶಾಲ ಸಭೆ ಸೇರಿತು. ಹರಿಲಾಲನಿಗೆ ಈ ಸಭೆಯ ಬಗ್ಗೆ ತಿಳಿದಾಗ ಅವನು ಒಂದು ಕ್ಷಣವನ್ನೂ ವ್ಯರ್ಥ ಮಾಡದೆ ಜೋಹಾನ್ಸ್‌ಬರ್ಗ್‌ಗೆ ಬಂದ. ಸಾರ್ವಜನಿಕ ಸಭೆಯ ಜಾಗಕ್ಕೆ ಅಕಸ್ಮಾತ್ ಹರಿಲಾಲ ಬಂದಿರುವುದನ್ನು ನೋಡಿ ವಿದ್ಯುತ್ ಸಂಚಾರವಾದಂತಾಯಿತು. 'ಚಿಕ್ಕ ಗಾಂಧಿಯವರಿಗೆ ಜಯವಾಗಲಿ' ಘೋಷಣೆಗಳಿಂದ ಸಭಾಸ್ಥಳ ಪ್ರತಿಧ್ವನಿಸಿತು. ಹರಿಲಾಲ ಇಲ್ಲಿಗೆ ಓರ್ವ ಶ್ರೋತೃವಾಗಿ ಅಥವಾ ಪ್ರೇಕ್ಷಕನಾಗಿ ಮಾತ್ರ ಬಂದಿದ್ದ, ಆದರೆ ಉತ್ಸಾಹಿ ಭಾರತೀಯರು, ಬ್ಯಾರಿಸ್ಟರ್ ಗಾಂಧೀಜಿಯವರ ಪುತ್ರ ಚಿಕ್ಕ ಗಾಂಧಿಯನ್ನು ವಿಧಿವತ್ತಾಗಿ ಎತ್ತಿ ವೇದಿಕೆಗೇ ತಂದು ಕೂರಿಸಿದರು. ಹೀರಾಲಾಲ ಈಗ ಹೀರಾಲಾಲನಾಗಿ ಮಾತ್ರ ಇರದೆ, ಭಾರತೀಯ ಸಮಾಜದ ಮುಖಂಡನಾಗಿ, ಚಿಕ್ಕ ಗಾಂಧಿಯಾಗಿದ್ದ; ಎಲ್ಲರು ಅವನ ಮುಖಂಡತ್ವವನ್ನು ಒಪ್ಪಿಕೊಂಡಂತಿತ್ತು.

ಅಷ್ಟು ಬೃಹತ್ ಗುಂಪಿನೆದುರು ಮಾತನಾಡುವ